**-1-**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

**ಓ.ಎಸ್. ಸಂಖ್ಯೆ . 81 /2026**

**ದಿನಾಂಕ 15.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಿ.ಡಬ್ಲೂ 1**

| | | |
|---|---|---|
| ಸಾಕ್ಷಿದಾರರ ಹೆಸರು | - | ಎಂ ವಿ ಶಿವಾನಂದ |
| ತಂದೆಯ ಹೆಸರು | - | ಎಂ ಎಲ್ ವೆಂಕಟಣ್ಣಶೆಟ್ಟಿ |
| ವಯಸ್ಸು | - | 49 ವರ್ಷ |
| ವೃತ್ತಿ | - | ವ್ಯಾಪಾರ |
| ವಾಸ ಸ್ಥಳ | - | ಕಡಪಲಕೆರೆ ಗ್ರಾಮ |

**ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ ಪಿ ಟಿ ಆರ್ ವಕೀಲರಿಂದಃ**

ನಾನು ಈ ದಾವಾದಲ್ಲಿ ವಾದಿಯಾಗಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯನ್ನು ಸಾಕ್ಷ್ಯ ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಯಿಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸಿ ಸಹಿ ಮಾಡಿರುತ್ತೇನೆ.

ನಾನು ಮುಂದಿನ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

ಪ್ರತಿವಾದಿಗಳು ಕೊಟ್ಟ ಹಿಂಬರಹವನ್ನು ಹಾಜರುಮಾಡಿದ್ದೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನನ್ನ ಎಸ್ ಎಸ್ ಎಲ್ ಸಿ ಅಂಕಪಟ್ಟಿ, ನನ್ನ ಜನನ ಪ್ರಮಾಣ ಪತ್ರ, ನನ್ ಆಧಾರ್ ಕಾರ್ಡ್ ಗಳ ನೋಟರಿ ಪ್ರತಿಗಳನ್ನು ಹಾಜರುಮಾಡಿದ್ದೇನೆ. ಅವುಗಳನ್ನು ನಿಪಿ-2 ರಿಂದ 4 ಎಂದು ಗುರುತಿಸಲಾಯಿತು. ದಿ: 13.11.2025ರ ನೋಟಿಸಿನ ಕಛೇರಿ ಪ್ರತಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಏಳು ಅಂಚೆ ರಸೀದಿಗಳನ್ನು, ಐದು ಅಂಚೆ ಸ್ವೀಕೃತಿಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-6 ರಿಂದ 17 ಎಂದು ಗುರುತಿಸಲಾಯಿತು. ನನ್ನ ಎರಡು ಶಾಲಾ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದ.**

**O.S.No.81/2026**
**PW-1**

ನನ್ನ ಶಾಲಾ ದಾಖಲೆಯಲ್ಲಿ ನನ್ನ ಹೆಸರು ಶಿವಾನಂದ ವಿ ಮತ್ತು ನನ್ನ ತಂದೆ ಹೆಸರು ವೆಂಕಟಣ್ಣಶೆಟ್ಟಿ ಎಂ ಎಂದು ನಮೂದಾಗಿದೆ ಎಂದರೆ ಸರಿ. ನನ್ನ ಶಾಲಾ ದಾಖಲೆಯಲ್ಲಿ ನನ್ನ ಹೆಸರು ಎಂ ವಿ ಶಿವಾನಂದ ಮತ್ತು ನನ್ನ ತಂದೆ ಹೆಸರು ಎಂ ಎಲ್ ವೆಂಕಟಣ್ಣಶೆಟ್ಟಿ ಎಂದು ನಮೂದಿಸಲು ಪ್ರತಿವಾದಿಗಳಿಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಸಲ್ಲಿಸಲು ವ್ಯಾಜ್ಯ ಕಾರಣ ಇಲ್ಲದೇ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ . ಹೇ. ಕೇ. ಸರಿ ಇದೆ.**

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,**
**ಪಾವಗಡ**